ಅದನ್ನು ಸರ್ಕಾರ ಪರಿಶೀಲನೆ ಮಾಡಿ ಕೂಡಲೆ ಮಾಡುತ್ತದೆ. ಮಾನ್ಯ ಸದಸ್ಯರು ವಿರೋಧ ಪಕ್ಷದ ಶಾಸಕರು ಇರುವ ಕಡೆ ಸಮಿತಿ ರಚನೆ ಮಾಡಿಲ್ಲವೆಂದು ಏನು ಆರೋಪ ಮಾಡಿದರು, ತಾವು ದಯವಿಟ್ಟು ಪಟ್ಟಿ ನೋಡಬೇಕು. ಓದಿ ನೋಡಿ. ಆದರೆ ಕೆಲವು ಕ್ಷೇತ್ರದಲ್ಲಿ recommendation ಗಳನ್ನು ಜಿಲ್ಲಾಧಿಕಾರಿ ಮುಖಾಂತರ ಕೇಳಿರುತ್ತೇವೆ. ಎಲ್ಲೆಲ್ಲಿ ಬಂದಿಲ್ಲ ಅಲ್ಲಿ ಕೂಡಲೆ ತರಿಸಿ ಮಾಡುವ ವ್ಯವಸ್ಥೆಯನ್ನು ಮಾಡುತ್ತೇವೆ.

ವಿದ್ಯುತ್ ಟ್ರಾನ್ಸ್‌ಫಾರ್ಮರ್‌ಗಳ ಕೊರತೆ

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 42 (159)

ಸದಸ್ಯರ ಹೆಸರು : ಶ್ರೀ ಹೆಚ್.ಡಿ.ರೇವಣ್ಣ (ಹೊಳೆನರಸೀಪುರ)

ಉತ್ತರಿಸುವ ಸಚಿವರು : ಕುಮಾರಿ ಶೋಭಾ ಕರಂದ್ಲಾಜೆ (ಇಂಧನ ಸಚಿವರು)

ಪ್ರಶ್ನೆಗಳು:–

ಅ) ರಾಜ್ಯದಲ್ಲಿ ಕಳೆದ ಮೂರು ವರ್ಷಗಳಿಂದ ವಿದ್ಯುತ್ ಟ್ರಾನ್ಸ್‌ಫಾರ್ಮರ್‌ಗಳ ಕೊರತೆಯನ್ನು ಎದುರಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ, ಟ್ರಾನ್ಸ್‌ಫಾರ್ಮರ್‌ಗಳ ಕೊರತೆಯನ್ನು ನೀಗಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು? ಪೂರ್ಣ ಮಾಹಿತಿ ನೀಡುವುದು.

ಉತ್ತರಗಳು:–

ಅ) ರಾಜ್ಯದಲ್ಲಿ ವಿದ್ಯುತ್ ಸರಬರಾಜು ಕಂಪನಿಗಳು ಸ್ವಲ್ಪಮಟ್ಟಿನ ವಿದ್ಯುತ್ ವಿತರಣಾ ಟ್ರಾನ್ಸ್‌ಫಾರ್ಮರ್‌ಗಳ ಕೊರತೆ ಎದುರಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿರುತ್ತದೆ.

ಆ) ವಿತರಣಾ ಟ್ರಾನ್ಸ್‌ಫಾರ್ಮರ್‌ಗಳ ಕೊರತೆಯನ್ನು ನೀಗಿಸಲು ಈ ಕೆಳಕಂಡ ಕ್ರಮಗಳನ್ನು ಸರ್ಕಾರವು ಕೈಗೊಳ್ಳುತ್ತಿದೆ.

ಅ. ವಿವಿಧ ಕಾರಣಗಳಿಂದ ವಿಫಲಗೊಳ್ಳುವ ವಿತರಣಾ

ಟ್ರಾನ್ಸ್‌ಫಾರ್ಮರ್‌ಗಳನ್ನು ಶೀಘ್ರಗತಿಯಲ್ಲಿ ಬದಲಾಯಿಸಲು ಕ್ರಮ ಕೈಗೊಳ್ಳಲಾಗುತ್ತಿದೆ. ಅಲ್ಲದೇ, ವಿಫಲವಾಗುವ ವಿತರಣಾ ಟ್ರಾನ್ಸ್‌ಫಾರ್ಮರ್‌ಗಳನ್ನು ಶೀಘ್ರಗತಿಯಲ್ಲಿ ದುರಸ್ತಿಗೊಳಿಸಿ ವಿತರಣಾ ಟ್ರಾನ್ಸ್‌ಫಾರ್ಮರ್‌ಗಳ ಲಭ್ಯತೆಯನ್ನು ಹೆಚ್ಚಿಸಲು ರಾಜ್ಯಾದ್ಯಂತ ಒಟ್ಟು 60 ಟ್ರಾನ್ಸ್‌ಫಾರ್ಮರ್ ದುರಸ್ತಿ ಕೇಂದ್ರಗಳು ಕಾರ್ಯನಿರ್ವಹಿಸುತ್ತಿವೆ. ಪ್ರಸಕ್ತ ಸಾಲಿನಲ್ಲಿ (2011–12) ಡಿಸೆಂಬರ್ 2011ರ ಅಂತ್ಯದವರೆಗೆ ಈ ಟ್ರಾನ್ಸ್‌ಫಾರ್ಮರ್ ದುರಸ್ತಿ ಕೇಂದ್ರಗಳಿಂದ ಒಟ್ಟು 30,258 ವಿತರಣಾ ಟ್ರಾನ್ಸ್‌ಫಾರ್ಮರ್‌ಗಳನ್ನು ದುರಸ್ತಿಗೊಳಿಸಲಾಗಿರುತ್ತದೆ.

ಆ. ದುರಸ್ತಿಗೊಂಡ ಪರಿವರ್ತಕಗಳ ಗುಣಮಟ್ಟವನ್ನು ಕಾಪಾಡಲು ದುರಸ್ತಿಯ ಪ್ರತಿ ಹಂತದಲ್ಲಿ ಪರೀಕ್ಷಿಸಲು ಕ್ರಮ ಕೈಗೊಳ್ಳಲಾಗಿದೆ. ಶೀಘ್ರವಾಗಿ ಪರಿವರ್ತಕಗಳನ್ನು ದುರಸ್ತಿ ಮಾಡಿ ಅವುಗಳನ್ನು ಶೀಘ್ರವಾಗಿ ಬದಲಾಯಿಸುವ ಸಂಬಂಧ ವಿಭಾಗೀಯ ಮಟ್ಟದಲ್ಲಿ ದುರಸ್ತಿಗೆ ಅವಾರ್ಡ್ ಮಾಡಲು ಕ್ರಮ ಕೈಗೊಳ್ಳಲಾಗಿದೆ.

ಇ. ಪರಿವರ್ತಕಗಳ ಕೊರತೆಯನ್ನು ನೀಗಿಸಲು ಖರೀದಿಯನ್ನು ಚುರುಕುಗೊಳಿಸಲಾಗಿದ್ದು, ಏಪ್ರಿಲ್ 2011 ರಿಂದ ಡಿಸೆಂಬರ್ 2011ರ ಅಂತ್ಯದವರೆಗೆ ಒಟ್ಟು 12,906 ಪರಿವರ್ತಕಗಳನ್ನು ಖರೀದಿಸಲಾಗಿದೆ.

ಈ. ಅಕ್ರಮ ನೀರಾವರಿ ಪಂಪ್‌ಸೆಟ್‌ಗಳನ್ನು ಸಕ್ರಮಗೊಳಿಸಿ ಅವುಗಳಿಗೆ ಮೂಲಭೂತ ಸೌಕರ್ಯ ನೀಡಿ ಈ ಯೋಜನೆಯಡಿ 3 ರಿಂದ 5 ಪಂಪ್‌ಸೆಟ್‌ಗಳಿಗೆ ಒಂದು 25 ಕೆ.ವಿ.ಯ ಪರಿವರ್ತಕವನ್ನು ಸ್ಥಾಪಿಸಿ ಪರಿವರ್ತಕದ ವಿಫಲತೆಯನ್ನು ನೀಗಿಸಲು ಕ್ರಮ ಕೈಗೊಳ್ಳಲಾಗುವುದು.

ಉ. ರಾಜ್ಯದ ಗ್ರಾಮಾಂತರ ಪ್ರದೇಶಗಳಲ್ಲಿ "ನಿರಂತರಜ್ಯೋತಿ" ಎಂಬ ಯೋಜನೆಯನ್ನು ಅನುಷ್ಠಾನಗೊಳಿಸಲಾಗುತ್ತಿದ್ದು, ಈ ಯೋಜನೆಯಡಿ ಕೃಷಿ ಮತ್ತು ಕೃಷಿಯೇತರ ಸ್ಥಾವರಗಳಿಗೆ ಪ್ರತ್ಯೇಕ ಫೀಡರ್‌ಗಳನ್ನು ಹಾಗೂ ಹೆಚ್ಚುವರಿ ವಿತರಣಾ ಟ್ರಾನ್ಸ್‌ಫಾರ್ಮರ್‌ಗಳನ್ನು ಅಳವಡಿಸುವುದರಿಂದ, ಗ್ರಾಮಾಂತರ

ಪ್ರದೇಶಗಳಲ್ಲಿ ಹಾಲಿ ಇರುವ ಫೀಡರ್‌ಗಳಲ್ಲಿನ ವಿದ್ಯುತ್ ಹೊರೆಯು ಕಡಿಮೆಗೊಳ್ಳುತ್ತದೆ. ಇದರಿಂದ, ವಿತರಣಾ ಟ್ರಾನ್ಸ್‌ಫಾರ್ಮರ್‌ಗಳ ವಿಫಲತೆಯು ಕಡಿಮೆಗೊಂಡು, ಕೊರತೆಯನ್ನು ನೀಗಿಸಬಹುದಾಗಿದೆ. ಅಲ್ಲದೇ, ಈ ಯೋಜನೆಯಿಂದ ಕೆಪಾಸಿಟರ್ ಮೂಲಕ ನೀರಾವರಿ ಪಂಪುಸೆಟ್ಟುಗಳನ್ನು ಚಾಲನೆಗೊಳಿಸುವುದನ್ನು ತಡೆಗಟ್ಟಬಹುದಾಗಿದೆ.

ಊ.ತಾಂತ್ರಿಕ ದೋಷಗಳಿಂದ ವಿತರಣಾ ಟ್ರಾನ್ಸ್‌ಫಾರ್ಮರ್‌ಗಳು ವಿಫಲವಾಗುವುದನ್ನು ಕಡಿಮೆ ಮಾಡಲು ವಿತರಣಾ ಟ್ರಾನ್ಸ್‌ಫಾರ್ಮರ್ ಕೇಂದ್ರಗಳಲ್ಲಿ ಹಾಗೂ ವಿದ್ಯುತ್ ಮಾರ್ಗಗಳಲ್ಲಿ ಅವಶ್ಯವಿರುವ ಎಲ್ಲಾ ನಿರ್ವಹಣಾ ಕಾಮಗಾರಿಗಳನ್ನು ಕೈಗೊಳ್ಳಲಾಗುತ್ತಿದೆ.

ಶ್ರೀ ಹೆಚ್.ಡಿ. ರೇವಣ್ಣ (ಹೊಳೆನರಸೀಪುರ):– ಮಾನ್ಯ ಸಭಾಧ್ಯಕ್ಷರೆ, ನಾನು ಮಾನ್ಯ ಇಂಧನ ಸಚಿವರ ಗಮನಕ್ಕೆ ತರುವುದೇನೆಂದರೆ ಈ ರಾಜ್ಯದಲ್ಲಿ transformer failure ಆದರೆ ಎಷ್ಟು ದಿವಸದಲ್ಲಿ ಹಾಕುತ್ತೀರಿ? ಅದಕ್ಕೆ ಏನಾದರೂ ಸಮಯ ನಿಗದಿ ಮಾಡಿದ್ದೀರಾ? ನಿಮ್ಮ ಗಮನಕ್ಕೆ ಬಂದರೂ ಸಹ ಕೆಲವು ಕಡೆ ಮೂರು, ನಾಲ್ಕು, ಐದು ತಿಂಗಳಾದರೂ transformer ಗಳನ್ನು ಹಾಕಿಲ್ಲ. ಆ transformer ಹಾಕಿದ್ದಕ್ಕೆ 4,000–5,000 ರೂ. ಕೊಡಬೇಕಾಗಿತ್ತು. ಕೇವಲ ಕುಡಿಯುವ ನೀರು ಒಂದೇ ಅಲ್ಲ. ಗ್ರಾಮಾಂತರ ಪ್ರದೇಶಗಳಲ್ಲಿ ಒಂದೆರಡು ತಿಂಗಳು ವಿದ್ಯುತ್ ಇಲ್ಲ. ಅದರ ಜೊತೆಗೆ IP Set ಇರುವಂತಹ ರೈತರು ಇವತ್ತು ಕಣ್ಣೀರಿನಲ್ಲಿ ಕೈ ತೊಳೆಯುತ್ತಿದ್ದಾರೆ. ಈಗಾಗಲೇ ತಾವೇನು ಹೇಳಿದ್ದೀರೆಂದರೆ ಸುಮಾರು 60 transformer ಗಳ ದುರಸ್ತಿ ಕೇಂದ್ರಗಳು ಇದೆ. ಅದರಲ್ಲಿ 2011–2012ರಲ್ಲಿ ಸುಮಾರು 30,258 ವಿತರಣಾ transformer ಗಳನ್ನು ದುರಸ್ತಿಗೊಳಿಸಲಾಗಿದೆ ಎಂದು ಹೇಳಿದ್ದೀರಿ. ಒಟ್ಟು ಎಷ್ಟು transformer

ಗಳು failure ಆಗಿವೆ? ಅದರಲ್ಲಿ ಕೇವಲ 30,000 ಮಾತ್ರ ದುರಸ್ತಿ ಮಾಡಿದ್ದೀರಾ? ಅದರ ಜೊತೆಗೆ ನಿರಂತರ ಜ್ಯೋತಿ ಯೋಜನೆ ಯಾವಾಗ, ಯಾವ ಜಿಲ್ಲೆಯಲ್ಲಿ ಪ್ರಾರಂಭ ಮಾಡಿದ್ದೀರಿ? ಅದಕ್ಕೆ ಎಷ್ಟು ಹಣ ಇಟ್ಟಿದ್ದೀರಿ? ನಿರಂತರ ಜ್ಯೋತಿ ಯೋಜನೆ ಯಾವಾಗ ಜಾರಿಗೆ ಬಂದಿದೆ ಎಂದು ಇಂಧನ ಸಚಿವರು ತಿಳಿಸಬೇಕು.

ಕುಮಾರಿ ಶೋಭಾ ಕರಂದ್ಲಾಜೆ:– ಮಾನ್ಯ ಸಭಾಧ್ಯಕ್ಷರೆ, ಸನ್ಮಾನ್ಯ ರೇವಣ್ಣನವರು transformer ಸರಬರಾಜಿನ ಸಮಸ್ಯೆ ಬಗ್ಗೆ ಹೇಳಿದ್ದಾರೆ. ಇಡೀ ರಾಜ್ಯದಲ್ಲಿ ಈ ಸಮಸ್ಯೆ ಇದೆ ಎನ್ನುವ ಸತ್ಯವನ್ನು ನಾನು ಒಪ್ಪಿಕೊಳ್ಳಬೇಕಾಗುತ್ತದೆ. ಏಕೆಂದರೆ ಎರಡು ಕಾರಣಕ್ಕಾಗಿ transformers ಸಮಸ್ಯೆ ಇದೆ. ಏಕೆಂದರೆ ಅವರಿಗೆ ಹೆಚ್ಚು ಅನುಭವ ಇದೆ. ನಾನು ಅವರ ವಾರಸುದಾರಳು. ಎರಡು ಕಾರಣಕ್ಕಾಗಿ transformer ಸರಬರಾಜಿನ ಸಮಸ್ಯೆ ಇರುವುದು. ಅದರ capacity ಎಷ್ಟಿದೆಯೋ ಅದಕ್ಕಿಂತ couble capacity ಯ ಪಂಪ್‌ಸೆಟ್‌ಗಳನ್ನು ನಾವು ಅಳವಡಿಸಿಕೊಂಡಿದ್ದೇವೆ. ರಾಜ್ಯದಲ್ಲಿ ಸುಮಾರು ಎರಡು ಲಕ್ಷ ಅಕ್ರಮ ಪಂಪ್‌ಸೆಟ್‌ಗಳಿವೆ. ನಮ್ಮ ರೈತರು ಎಲ್ಲಿ 10 ಪಂಪ್‌ಸೆಟ್ ಇರಬೇಕೋ ಅಲ್ಲಿ 15 ರಿಂದ 20 ಪಂಪ್‌ಸೆಟ್ ಹಾಕಿಕೊಳ್ಳುತ್ತಾರೆ. ಸಕ್ರಮ ಪಂಪ್‌ಸೆಟ್‌ಗಳು ಏನಿವೆ, ಅದರ ಆಧಾರದ ಮೇಲೆ ನಾವು transformer ಗಳನ್ನು ಅಳವಡಿಸುತ್ತಿದ್ದೇವೆ. ಇದನ್ನು ಸರಿ ಮಾಡಬೇಕೆನ್ನುವ ದೃಷ್ಟಿಯಿಂದ ಅಕ್ರಮ ಪಂಪ್‌ಸೆಟ್‌ಗಳನ್ನು ಸಕ್ರಮ ಮಾಡುವಂಥ ಒಂದು ಕಾರ್ಯ ಪ್ರಗತಿಯಲ್ಲಿದೆ. ಈಗಾಗಲೇ ಸುಮಾರು 41,000 transformer ಗಳನ್ನು ಸಕ್ರಮ ಮಾಡಿದ್ದೇವೆ. ಇನ್ನೂ ಒಂದೂವರೆ ಲಕ್ಷ ಪಂಪ್‌ಸೆಟ್‌ಗಳನ್ನು ಸಕ್ರಮ ಮಾಡಬೇಕಾಗಿದೆ. ಕಳೆದ ವರ್ಷದ ಬಜೆಟ್‌ನಲ್ಲಿ ನೂರು ಕೋಟಿ ರೂಪಾಯಿಗಳನ್ನು ಇಟ್ಟು, ಬೇರೆ ಬೇರೆ ಎಸ್ಕಾಂಗಳಿಗೆ ಬಿಡುಗಡೆ ಮಾಡಿದ್ದೇವೆ. ಆದರೆ ಇಷ್ಟು ಹಣ ಸಾಲುವುದಿಲ್ಲ, ಬಹಳಷ್ಟು ದೊಡ್ಡ ಪ್ರಮಾಣದ ಹಣದ ಅಗತ್ಯ ಕೂಡ ಇದೆ. ಈಗಾಗಲೇ transformer ದುರಸ್ತಿ ಮಾಡುವಂತಹ ಕೆಲಸದಲ್ಲಿ 60 ಕೇಂದ್ರಗಳು ಕಾರ್ಯಾಚರಣೆ ಮಾಡುತ್ತಿವೆ. ಇನ್ನೂ 10 ಹೊಸದಾಗಿ ನಾವು

ಬೇರೆ ಬೇರೆ ಭಾಗದಲ್ಲಿ ಆರಂಭ ಮಾಡುತ್ತಿದ್ದೇವೆ. CHESCOM ನಲ್ಲಿ 3 ಪ್ರಮುಖ ಸೆಂಟರ್‌ಗಳನ್ನು ಹೊಳೆನರಸೀಪುರ, ಕೆ.ಆರ್.ಪೇಟೆ ಮತ್ತು ಪಾಂಡವಪುರ ಸೇರಿದಂತೆ ಮಾಡುತ್ತಿದ್ದೇವೆ. ನಾಗಮಂಗಲ ಮತ್ತು ಮಳವಳ್ಳಿಯಲ್ಲಿ ಸಣ್ಣ ಸೆಂಟರ್‌ಗಳನ್ನು ನಾವು ಆರಂಭ ಮಾಡುತ್ತಿದ್ದೇವೆ. ಹಾಗೆಯೇ GESCOM ನಲ್ಲಿ ಸಿಂಧನೂರು ಮತ್ತು ಗಂಗಾವತಿಯಲ್ಲಿ ಹೊಸದಾಗಿ ನಾವು ಸೆಂಟರ್ ಆರಂಭ ಮಾಡುತ್ತಿದ್ದೇವೆ. ಹಾಗಿಯೇ HESCOM ನಲ್ಲಿ ಹಾನಗಲ್ಲು, ಬಾದಾಮಿ, ಸಿಂಧಗಿ, ಹಿಣಕಲ್ ಮತ್ತು ಬಸವನ ಬಾಗೇವಾಡಿಯಲ್ಲಿ 10 ಸೆಂಟರ್‌ಗಳನ್ನು ಹೊಸದಾಗಿ ನಾವು ಆರಂಭ ಮಾಡುತ್ತಿದ್ದೇವೆ. ಎರಡನೆಯದಾಗಿ, ಇದಕ್ಕೆ ನಾವು ತೆಗೆದುಕೊಂಡಿರುವ ಒಂದು ಕ್ರಮವೆಂದರೆ ಅಕ್ರಮ ಪಂಪ್‌ಸೆಟ್ ಅನ್ನು ಸಕ್ರಮ ಮಾಡುವುದು. ಇನ್ನೊಂದು ಕೆ.ವಿ. ಕಡಿಮೆ ಮಾಡಬೇಕು. ಇವತ್ತು 100 ಕೆ.ವಿ. ಇದ್ದರೆ ಸಹಜವಾಗಿ 100 ಅಥವಾ 200 ಪಂಪ್‌ಸೆಟ್‌ಗಳು ಇರುತ್ತವೆ. ಒಂದು transformer ಸುಟ್ಟು ಹೋದರೆ ಅಷ್ಟು ಜನ ರೈತರಿಗೆ ತೊಂದರೆಯಾಗುತ್ತದೆ. ಅದಕ್ಕಾಗಿ ಇವತ್ತು ತೊಂದರೆಯನ್ನು ಕಡಿಮೆ ಮಾಡುವಂಥ ದೃಷ್ಟಿಯಿಂದ ಕೇವಲ 25 ಕೆ.ವಿ ಯನ್ನು ಹಾಕಬೇಕು. ಆಗ ಕೇವಲ ಚಿಕ್ಕ ರೈತರಾದರೆ 2 ಅಥವಾ 3 ಪಂಪ್‌ಸೆಟ್‌ಗಳಿಗೆ ಮಾತ್ರ ಸೀಮಿತವಾಗುತ್ತದೆ. ಅದರಿಂದ 25 ಕೆ.ವಿ. transformer ಹಾಕಬೇಕು ಎಂದು ನಿರ್ಧಾರ ತೆಗೆದುಕೊಂಡಿದ್ದೇವೆ. ಇವತ್ತು ಬಹಳ ಕಡೆ ದೊಡ್ಡ ಪ್ರಮಾಣದಲ್ಲಿ ಹೊಸ transformer ಗಳ ಬೇಡಿಕೆ ಇದೆ. ಈ ವರ್ಷ ಏಪ್ರಿಲ್‌ನಿಂದ ಡಿಸೆಂಬರ್ ತನಕ ಕೇವಲ 8 ತಿಂಗಳ ಅವಧಿಯಲ್ಲಿ 12,906 ಹೊಸ transformer ಗಳನ್ನು ನಾವು ಖರೀದಿ ಮಾಡಿದ್ದೇವೆ. ನಮ್ಮ ಕವಿಕಾದಿಂದ ಹೊಸ transformer ಗಳು ಬರುತ್ತಿವೆ. ಈಗ ದೊಡ್ಡ ಪ್ರಮಾಣದಲ್ಲಿ ಅಲ್ಲಿ ಉತ್ಪಾದನೆ ಆಗುತ್ತಿದೆ. ಕವಿಕಾವನ್ನು upgradation ಮಾಡುವ ದೃಷ್ಟಿಯಿಂದ ನಾವು ಮತ್ತು ಕೈಗಾರಿಕೆ ಸಚಿವರು ಸೇರಿ ಅದರ ಬಗ್ಗೆ ಯೋಚನೆ ಮಾಡುತ್ತಿದ್ದೇವೆ. ಈ ವರ್ಷ 12,900 transformer ಖರೀದಿ ಮಾಡಿದ್ದೇವೆ. ಇನ್ನೂ ಹೆಚ್ಚು ಆಗಬೇಕಾಗಿದೆ.

ಇನ್ನೊಂದು ವಿಚಾರ ನಾವು ಯೋಚನೆ ಮಾಡುತ್ತಿರುವುದೇನೆಂದರೆ ತುಂಬಾ ಕಡೆ ಶಾಸಕರು ಎಂಎಲ್ಎ LADನಲ್ಲಿ transformer ನ ಖರೀದಿ ಮಾಡುವುದಕ್ಕೆ ಅವಕಾಶ ಮಾಡಿಕೊಡಬೇಕು ಎಂದು ಕೇಳುತ್ತಿದ್ದಾರೆ. ಅದಕ್ಕಾಗಿ ನಾವು Planning Department ಜೊತೆ ಮಾತನಾಡಿದ್ದೇವೆ. ಏಕೆಂದರೆ ಅವರು MLA LAD ಬಗ್ಗೆ ಯೋಚನೆ ಮಾಡುವಂಥವರು ಅದಕ್ಕಾಗಿ 10 ಲಕ್ಷದವರೆಗೆ MLA LAD ನಲ್ಲಿ ಹೊಸ transformer ಅನ್ನು ಖರೀದಿ ಮಾಡಿ, ಅದು MLA Transformer Bank ಎಂದು ಮಾಡುವುದಕ್ಕೆ ಯೋಚನೆಯನ್ನು ಕೂಡ ಮಾಡಿ, ಅದರ ಬಗ್ಗೆ Planning Department ಜೊತೆ ಮಾತನಾಡಿದ್ದೇವೆ. ಮೂರನೆಯದಾಗಿ, ಇವತ್ತು ಬಹಳ ದೊಡ್ಡ ಪ್ರಮಾಣದಲ್ಲಿ ಈ ರೀತಿ ಸಮಸ್ಯೆ ಇದೆ. ಮುಖ್ಯವಾಗಿ ಮಾನ್ಯ ರೇವಣ್ಣನವರು ನಿರಂತರ ಜ್ಯೋತಿ ಯೋಜನೆ ಬಗ್ಗೆ ಕೇಳಿದ್ದಾರೆ. ನಿರಂತರ ಜ್ಯೋತಿ ಯೋಜನೆಯ 1ನೇ ಹಂತ ಮಾರ್ಚ್ 31ರ ಒಳಗೆ ಮುಗಿಸಬೇಕೆನ್ನುವ ಎಲ್ಲಾ ಪ್ರಕ್ರಿಯೆ ನಡೆಯುತ್ತಿದೆ. 2 ನೇ ಹಂತ ಡಿಸೆಂಬರ್ 31ರ ಒಳಗೆ ಮುಗಿಯುತ್ತದೆ. RLMS ಎನ್ನುವುದು ನಿಮ್ಮ ಕಾಲದಲ್ಲಿ ಆಯಿತು, ಅದು ನಿಮಗೆ ಗೊತ್ತಿದೆ. ನಿಮಗೆ ಗೊತ್ತಿರುವ ಹಾಗೆ ಬಹಳ ಜಿಲ್ಲೆಗಳಲ್ಲಿ RLMS falure ಆಗಿದೆ. RLMS ಇರುವ ಕಡೆ ನಾವು ಟೆಂಡರ್ ಕರೆದಿಲ್ಲ. ಆದರೆ ಈಗ ಕೆಲವು ತಾಲ್ಲೂಕುಗಳಲ್ಲಿ ಹೋಬಳಿಯಲ್ಲಿದೆ. ಒಂದು ಹೋಬಳಿ RLMS ಆಗಿದೆ. ಉಳಿದ ಹೋಬಳಿ without RLMS ಇದೆ. ಎಲ್ಲಿ without RLMS ಇದೆ ಅಲ್ಲಿ ನಿರಂತರ ಜ್ಯೋತಿ ಯೋಜನೆಯನ್ನು ಪೂರ್ಣ ಮಾಡುತ್ತಿದ್ದೇವೆ. ಡಿಸೆಂಬರ್ ತಿಂಗಳಿನಲ್ಲಿ ಇಡೀ ರಾಜ್ಯದಲ್ಲಿ ಪೂರ್ಣವಾಗುತ್ತದೆ. ಆದರೆ ಈಗಾಗಲೇ RLMS ಇರುವಲ್ಲಿ ಇದು ಏಕೆ failure ಆಗಿತ್ತು ಅನ್ನುವಂಥ ರಿಪೋರ್ಟ್ ಅನ್ನು ತರಿಸಿಕೊಂಡು ನಂತರ 3ನೇ ಹಂತದಲ್ಲಿ ಟೆಂಡರ್ ಅನ್ನು ಕರೆಯಬೇಕಾಗುತ್ತದೆ. ನಾವು ಈ system ಅನ್ನು ಬರುವ ದಿವಸಗಳಲ್ಲಿ ಸುಧಾರಣೆ ಮಾಡುವ ದೃಷ್ಟಿಯಿಂದ ಹಲವಾರು ಕಾರ್ಯಕ್ರಮಗಳನ್ನು ಕೈಗೊಳ್ಳುತ್ತಿದ್ದೇವೆ.

ಶ್ರೀ ಹೆಚ್.ಡಿ. ರೇವಣ್ಣ:– ಮಾನ್ಯ ಅಧ್ಯಕ್ಷರೆ, ತಾವು ಎಷ್ಟು ದಿವಸಗಳಲ್ಲಿ ಈ ಟ್ರಾನ್ಸ್‌ಫಾರ್ಮರ್‌ಗಳು ಹೋಗುತ್ತದೆ. ಇದನ್ನು ಎಷ್ಟು ದಿವಸಗಳಲ್ಲಿ ಹಾಕುತ್ತೀರೆಂಬ ಬಗ್ಗೆ ನಿಗದಿ ಮಾಡಬೇಕು. ಇದನ್ನು 15 ದಿವಸಗಳಲ್ಲಿ ಹಾಕುತ್ತೀರಾ, 20 ದಿವಸಗಳಲ್ಲಿ ಹಾಕುತ್ತಾರಾ ಎಂಬ ಬಗ್ಗೆ ಸ್ಪಷ್ಟವಾಗಿ ಉತ್ತರ ಕೊಡಬೇಕು, ಇಲ್ಲದೇ ಹೋದರೆ ಏನಾಗುತ್ತದೆಂದರೆ ಇಂಜಿನಿಯರ್‌ಗಳು, ಅಸಿಸ್ಟೆಂಟ್ ಇಂಜಿನಿಯರ್‌ಗಳು ಯಾರು ಇರುತ್ತಾರೆ, ರೈತರು ಇವರಿಗೆ 5,000 ರೂ.ಗಳನ್ನು ಕೊಟ್ಟವರಿಗೆ ಕೊಡುತ್ತಾರೆ, 2,000 ರೂ.ಗಳನ್ನು ಕೊಟ್ಟರೆ ಕೊಡುತ್ತಾರೆ. ಇದು ಈ ರೀತಿ ಆಗಬಾರದು. ನಮ್ಮಲ್ಲೇ ಸುಮಾರು 200–300 ಟ್ರಾನ್ಸ್‌ಫಾರ್ಮರ್‌ಗಳು ಹಾಳಾಗಿವೆ. ತಾವು ಇದಕ್ಕೆ seniority ಮಾಡುತ್ತೀರೋ, ಏನು ಮಾಡುತ್ತೀರೆಂಬುದು ನನಗೆ ಗೊತ್ತಿಲ್ಲ. ಕೆಲವು ಕಡೆಗಳಲ್ಲಿ ಅಧಿಕಾರಿಗಳಿಂದ ಟ್ರಾನ್ಸ್‌ಫಾರ್ಮರ್‌ಗಳ ದಂಧೇ ನಡೆಯುತ್ತಿದೆ. ತಾವು ಇದನ್ನು ನಿಲ್ಲಿಸುವುದಕ್ಕೆ ಏನು ಮಾಡುತ್ತೀರಿ? ಮತ್ತೆ ನಿರಂತರ ಜ್ಯೋತಿ ಯೋಜನೆ ಯಾವಾಗ ಪ್ರಾರಂಭವಾಯಿತು? ಮತ್ತೆ ಇದನ್ನು 1ನೇ ಹಂತ, 2ನೇ ಹಂತ ಎಂದು ಹೇಳಿದ್ದೀರಿ. ಇದು ಯಾವಾಗ ಪ್ರಾರಂಭವಾಯಿತು? ನಿರಂತರ ಜ್ಯೋತಿ ಯೋಜನೆಯನ್ನು ಎಷ್ಟು ಕಿ.ಮೀ.ವರೆಗೆ feeder ಗಳನ್ನು change ಮಾಡುವುದಕ್ಕೆ ಏನು ಕ್ರಮ ತೆಗೆದುಕೊಂಡಿದ್ದೀರಿ? ಈ ವಿಷಯಗಳನ್ನು ದಯಮಾಡಿ ತಿಳಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಈಶ್ವರ ಭೀಮಣ್ಣ ಖಂಡ್ರೆ:– ಮಾನ್ಯ ಅಧ್ಯಕ್ಷರೆ, ಅಕ್ರಮ ಸಕ್ರಮ ಮಾಡುವುದಕ್ಕೆ ಯಾವ ದಿನಾಂಕ ಕೊನೆ ಎಂಬುದನ್ನು ತಿಳಿಸಬೇಕು. ಇದು ಜನವರಿ ತಿಂಗಳ 31ನೇ ತಾರೀಖಿನಂದೇ ಅಥವಾ ಮಾರ್ಚ್ 31ನೇ ದಿನಾಂಕಕ್ಕೆ ನಿಗದಿ ಮಾಡಬೇಕೆಂದು ಕೇಳುತ್ತಿದ್ದೇನೆ.

ಶ್ರೀ ಶಿವರಾಜ ಸಂಗಪ್ಪ ತಂಗಡಗಿ:– ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರನ್ನು ಕೇಳುವುದೇನೆಂದರೆ, ನಮ್ಮ ಜಿಲ್ಲೆಯಲ್ಲಿ ಟ್ರಾನ್ಸ್‌ಫಾರ್ಮರ್ ವಿಚಾರಲ್ಲಿ ಅಧಿಕಾರಿಗಳ ಮೂಲಕ ಕಳುಹಿಸಿದರೆ ಇದನ್ನು approval ಮಾಡಿ ಕಳುಹಿಸಿಲ್ಲ. ಅದಕ್ಕೆ ಅವರಿಂದ ಬರುವ ಸಿದ್ಧ ಉತ್ತರವೇನೆಂದರೆ, ಬಜೆಟ್

ಇಲ್ಲವೆನ್ನುವ ಮಾತನ್ನು ಹೇಳುತ್ತಿದ್ದಾರೆ. ಇದರ ಜೊತೆಗೆ ಇನ್ನೊಂದು ಸಮಸ್ಯೆ ಏನಿದೆಯೆಂದರೆ, ಒಂದು ಟ್ರಾನ್ಸ್‌ಫಾರ್ಮರ್ ಸಣ್ಣ ಸಣ್ಣ ಹಳ್ಳಿಗಳಲ್ಲಿ ಸುಟ್ಟು ಹೋದರೆ minimum 15 ರಿಂದ 20 ದಿವಸಗಳಾದರೂ ಅಲ್ಲಿಗೆ ಟ್ರಾನ್ಸ್‌ಫಾರ್ಮರ್‌ಗಳು ಬರುವುದಿಲ್ಲ. ಈ ರೀತಿ ಏಕೆಂದರೆ, ನಮ್ಮ ಜಿಲ್ಲೆಯಲ್ಲಿ ಟ್ರಾನ್ಸ್‌ಫಾರ್ಮರ್‌ಗೆ ತೊಂದರೆ ಇದೆಯೆಂಬ ಮಾತನ್ನು ಹೇಳುತ್ತಿದ್ದಾರೆ. ದಯಮಾಡಿ ಈ ವಿಷಯಕ್ಕೆ ಮಾನ್ಯ ಮಂತ್ರಿಯವರು ಉತ್ತರ ಕೊಡಬೇಕು. ಇದರ ಜೊತೆಗೆ ನಮಗೆ ಹೆಚ್ಚುವರಿ ಟ್ರಾನ್ಸ್‌ಫಾರ್ಮರ್‌ಗಳನ್ನು ಕಳುಹಿಸುವ ವ್ಯವಸ್ಥೆ ಮಾಡಿದರೆ ಒಳ್ಳೆಯದಾಗಿರುತ್ತದೆ. ಇವತ್ತು ಇಲ್ಲಿ ಕುಡಿಯುವ ನೀರಿಗೆ ಸಮಸ್ಯೆಯಾಗುತ್ತಿದೆ.

ಶ್ರೀ ವೈ.ಎನ್. ರುದ್ರೇಶ್ ಗೌಡ:– ಮಾನ್ಯ ಅಧ್ಯಕ್ಷರೆ, ಟ್ರಾನ್ಸ್‌ಫಾರ್ಮರ್‌ಗಳನ್ನು ಟ್ರಾನ್ಸ್‌ಫರ್ ಮಾಡುತ್ತಾರೆ. ಇದಕ್ಕೆ ಒಂದು ಕ್ರಮ ತೆಗೆದುಕೊಳ್ಳಬೇಕು. ಅಲ್ಲಿ ಅಧಿಕಾರಿಗಳೇ ಹೇಳುವಂಥದ್ದು ಏನೆಂದರೆ, ನೀವೇ ಹಣವನ್ನು ಕೊಟ್ಟು ಟ್ರಾನ್ಸ್‌ಫರ್ ಮಾಡಿ ಹಾಕಬೇಕೆಂದು ಹೇಳುತ್ತಾರೆ. ರೈತರೇ ತೆಗೆದುಕೊಂಡು ಹೋಗುವವರು, ತರುವವರು ಅವರೇ. ಎಲ್ಲವನ್ನೂ ರೈತರೆ ಮಾಡಲು ಹೇಗೆ ಸಾಧ್ಯ? ಈ ಬಗ್ಗೆ ಮಾನ್ಯ ಮಂತ್ರಿಯವರು ಗಮನಹರಿಸಬೇಕು. ಟ್ರಾನ್ಸ್‌ಫಾರ್ಮರ್‌ಗಳ ಬಗ್ಗೆ ತೊಂದರೆಯಾಗದ ಹಾಗೆ ಬೇಗನೆ ಒಂದು ವಾರ ಅಥವಾ ಹತ್ತು ದಿವಸಗಳಲ್ಲಿ ಸಿಗುವಂತೆ ಆಗಬೇಕು. ಅದು ಬಿಟ್ಟು ಕೆಲವು ಕಡೆಗಳಲ್ಲಿ ತಿಂಗಳುಗಟ್ಟಲೆ ಟ್ರಾನ್ಸ್‌ಫಾರ್ಮರ್ ಫೇಲ್ಯೂರ್ ಆದರೂ ಕೇಳುವುದಿಲ್ಲ, ಬರುವುದೂ ಇಲ್ಲ. ಈ ರೀತಿಯ ಸಮಸ್ಯೆ ಇದೆ. ಇದಕ್ಕೆ ಮಾನ್ಯ ಮಂತ್ರಿಯವರು ಸ್ಪಷ್ಟವಾಗಿ ಎಷ್ಟು ದಿವಸಗಳಲ್ಲಿ ಟ್ರಾನ್ಸ್‌ಫಾರ್ಮರ್‌ಗಳನ್ನು ಹಾಕುತ್ತಾರೆಂಬ ಬಗ್ಗೆ ತಿಳಿಸಬೇಕು. ಇದನ್ನು ನಿಗದಿಯಾಗಿ ಎಷ್ಟು ದಿವಸಗಳಲ್ಲಿ ಬದಲಾವಣೆ ಮಾಡಿ ಕೊಡುತ್ತಾರೆಂಬ ಬಗ್ಗೆ ಹೇಳಬೇಕು.

ಕುಮಾರಿ ಶೋಭಾ ಕರಂದ್ಲಾಜೆ:– ಮಾನ್ಯ ಅಧ್ಯಕ್ಷರೆ, ನಾವು ಅಕ್ರಮ ಪಂಪ್‌ಸೆಟ್‌ಗಳನ್ನು ಸಕ್ರಮ ಮಾಡುವುದಕ್ಕೆ ಬಹಳಷ್ಟು ಬಾರಿ ಅವಧಿಯನ್ನು

ವಿಸ್ತರಣೆ ಮಾಡಿದ್ದೇವೆ. ಈಗ ಜನವರಿ ತಿಂಗಳ 31ನೇ ತಾರೀಖಿಗೆ ಎಂದು ಹೇಳಿದ್ದೇವೆ. ಈಗ ಮತ್ತೆ ಕಾಲಾವಧಿಯನ್ನು ವಿಸ್ತರಣೆ ಮಾಡಬೇಕೆಂದು ಕೇಳುತ್ತಿರುವುದರಿಂದ 15 ದಿವಸಗಳ ಕಾಲಾವಧಿ ಮುಂದುವರೆಸಬಹುದು, ಏಕೆಂದರೆ ಮೂರ್ನಾಲ್ಕು ತಿಂಗಳುಗಳಿಂದ ಇದು ಮುಂದುವರೆಯುತ್ತಲೇ ಇದೆ.

ಶ್ರೀ ಈಶ್ವರ ಭೀಮಣ್ಣ ಖಂಡ್ರೆ:– ಮಾನ್ಯ ಅಧ್ಯಕ್ಷರೆ, ನಮ್ಮಲ್ಲಿ ರೈತರು ಬಹಳಷ್ಟು ಜನರು ಕಬ್ಬನ್ನು ಬೆಳೆಯುತ್ತಾರೆ. ಈ ಕಬ್ಬಿನ ಬಿಲ್ ಮಾರ್ಚ್ 31ನೇ ತಾರೀಖಿಗೆ ಪಾವತಿಯಾಗುತ್ತದೆ. ಹಾಗಾಗಿ ಅಕ್ರಮ ಸಕ್ರಮಕ್ಕೆ ಮಾರ್ಚ್ 31ನೇ ದಿನಾಂಕದವರೆಗೂ ಮುಂದುವರೆಸಬೇಕೆಂದು ನಮ್ಮ ಮನವಿ ಇದೆ.

ಶ್ರೀ ಶಿವರಾಜ್ ಸಂಗಪ್ಪ ತಂಗಡಗಿ:– ಕನಿಷ್ಠ ಒಂದು ತಿಂಗಳಾದರೂ ಮುಂದುವರೆಸಬೇಕೆಂದು ವಿನಂತಿ ಮಾಡುತ್ತೇವೆ.

(ಗೊಂದಲ)

ಶ್ರೀ ಅಮರೇಶ್:– ಮಾನ್ಯ ಅಧ್ಯಕ್ಷರೆ, ಇನ್ನು ಅರ್ಧಕ್ಕಿಂತ ಹೆಚ್ಚಿಗೆ ಪೆಂಡಿಂಗ್ ಇದೆ. ಅದಕ್ಕೆ ಮಾರ್ಚ್ 31ರವರೆಗೆ ಅವಧಿಯನ್ನು ಮುಂದುವರೆಸಬೇಕು.

ಅಧ್ಯಕ್ಷರು:–ಆಯಿತು, ಮಾನ್ಯ ಮಂತ್ರಿಗಳು 31ನೇ ಮಾರ್ಚ್‌ವರೆಗೂ ಮಾಡುತ್ತೇನೆಂದು ಹೇಳಿದ್ದಾರೆ.

ಶ್ರೀ ಶಿವರಾಜ್ ಸಂಗಪ್ಪ ತಂಗಡಗಿ:– ಮಾನ್ಯ ಅಧ್ಯಕ್ಷರೆ, ಮಾನ್ಯ ಮಂತ್ರಿಯವರೇ ಇಲ್ಲಿ ಮಾರ್ಚ್ 31ನೇ ದಿನಾಂಕದವರೆಗೂ ಎಂದು ಘೋಷಣೆ ಮಾಡಬೇಕು.

ಅಧ್ಯಕ್ಷರು:– ಘೋಷಣೆ ಮಾಡಿದ್ದಾರಲ್ಲ...

ಶ್ರೀ ಅಮರೇಶ್:– ಮಾನ್ಯ ಅಧ್ಯಕ್ಷರೆ, ಎಲ್ಲಾ ತಾಲ್ಲೂಕುಗಳಲ್ಲು ಬರಗಾಲವಿದೆ. ತಾವು ಜನರ ಬಗ್ಗೆ ಅರ್ಥ ಮಾಡಿಕೊಳ್ಳಬೇಕು.

ಶ್ರೀ ಶಿವರಾಜ್ ಸಂಗಪ್ಪ ತಂಗಡಗಿ:– ಮಾನ್ಯ ಅಧ್ಯಕ್ಷರೆ, ಮಾರ್ಚ್ 31ನೇ ತಾರೀಖಿನವರೆಗೂ ಎಂದು ಮಾಡಬೇಕು.

ಅಧ್ಯಕ್ಷರು:– ಹೇಳಿದ್ದಾರಲ್ಲಾ, ಮತ್ತೆ ಪುನಃ ಅದನ್ನೇ ಕೇಳುತ್ತೀರಲ್ಲಾ, ಮತ್ತೆ ಏಕೆ ಕೇಳುತ್ತಿದ್ದೀರಿ.

ಕುಮಾರಿ ಶೋಭಾ ಕರಂದ್ಲಾಜೆ:– ಮಾನ್ಯ ಅಧ್ಯಕ್ಷರೆ, ಅಕ್ರಮ ಪಂಪ್‌ಸೆಟ್‌ಗಳನ್ನು ಸಕ್ರಮ ಮಾಡುವುದಕ್ಕೆ ಬಹಳಷ್ಟು ಬಾರಿ ಕಾಲಾವಧಿಯನ್ನು ವಿಸ್ತರಣೆ ಮಾಡಿದ್ದೇವೆ. ಈಗ ಮತ್ತೆ ಎಲ್ಲಾ ಶಾಸಕರು ಕೇಳುತ್ತಿರುವುದರಿಂದ ಮಾರ್ಚ್ 31ನೇ ದಿನಾಂಕದವರೆಗೂ ವಿಸ್ತರಣೆ ಮಾಡುತ್ತೇವೆ. ಎರೆನೆಯದಾಗಿ, ಮಾನ್ಯ ರೇವಣ್ಣನವರು ನಿರಂತರ ಜ್ಯೋತಿಯನ್ನು ಎಷ್ಟು ಕಿ.ಮೀ ಆಗಿದೆಯೆಂದು ಕೇಳಿದ್ದಾರೆ. ಅವರು ಕೇಳಿರುವ ಪ್ರಶ್ನೆಯಲ್ಲಿ ಈ ಪ್ರಶ್ನೆ ಇಲ್ಲ. ಅದಕ್ಕೆ ಇದಕ್ಕೆ ಸಂಬಂಧಪಟ್ಟಂತೆ ತಕ್ಷಣದಲ್ಲಿ ನನ್ನ ಬಳಿ ಈಗ ಉತ್ತರವಿಲ್ಲ. ಹಾಗಾಗಿ ಮಾನ್ಯ ರೇವಣ್ಣನವರು ಬೇರೆ ಪ್ರಶ್ನೆ ರೂಪದಲ್ಲಿ ಕೇಳಿದರೆ, ಅದಕ್ಕೆ ನಾನು ಉತ್ತರ ಕೊಡುತ್ತೇನೆ.

ಅಧ್ಯಕ್ಷರು:– ಇದಕ್ಕೆ ಸಂಬಂಧಪಟ್ಟ ಮಾಹಿತಿಯನ್ನು ಅವರಿಗೆ ಕೊಡಿ. ಮಾನ್ಯ ಮಂತ್ರಿಯವರು ಆಮೇಲೆ ಉತ್ತರ ಕೊಡುತ್ತಾರೆ.

ಶ್ರೀ ಹೆಚ್.ಡಿ. ರೇವಣ್ಣ:– ಮಾನ್ಯ ಅಧ್ಯಕ್ಷರೆ, ನಿರಂತರ ಜ್ಯೋತಿ ಯೋಜನೆ ಬಗ್ಗೆ ಉತ್ತರವನ್ನು ಅವರು ಕೊಟ್ಟಿರುವಂಥದ್ದು. ಅವರು ಕೊಟ್ಟಿರುವಂಥದ್ದಕ್ಕೆ ನಾನು ಕೇಳುತ್ತಿರುವುದು. ಅವರು ನಿರಂತರ ಜ್ಯೋತಿ ಮುಖೇನ ಮಾಡುತ್ತೇವೆಂದು ಹೇಳಿದ್ದಾರೆ. ಅದಕ್ಕೆ ಎಷ್ಟು ಕಿ.ಮೀ. ಮಾಡುತ್ತಿದ್ದೀರೆಂದು ಕೇಳುತ್ತಿದ್ದೇನೆ. ದಯಮಾಡಿ ಇದರ ಬಗ್ಗೆ ತಿಳಿಸಿ.

ಅಧ್ಯಕ್ಷರು:– ಆಯಿತು, ಮಾನ್ಯ ಮಂತ್ರಿಯವರು ತಮಗೆ ಮಾಹಿತಿಯನ್ನು ಒದಗಿಸುತ್ತಾರೆ. ನಿಮ್ಮ ಹತ್ತಿರವೇ ಎಲ್ಲಾ ಮಾಹಿತಿ ಇದೆ, ತಾವು ಕೂಡ ಮಂತ್ರಿಯಾಗಿದ್ದವರು. ಅವರಿಗಿಂತ ಹೆಚ್ಚು ಮಾಹಿತಿ ತಮ್ಮ ಹತ್ತಿರವೇ ಇದೆ.

ಶ್ರೀ ಹೆಚ್.ಡಿ. ರೇವಣ್ಣ:– ಮಾನ್ಯ ಅಧ್ಯಕ್ಷರೆ, ಇದನ್ನು ತಿಳಿಸದೇ ಹೋದರೆ ಹೇಗೆ? ನಿರಂತರ ಜ್ಯೋತಿಯನ್ನು 60 ಸಾವಿರ ಕಿ.ಮೀ. ಮಾಡುತ್ತೇವೆಂದು ಹೇಳಿ, 4,000 ಕೋಟಿ ರೂ.ಗಳಿಗೆ purchase

ಮಾಡಿರುವುದು. ಆದುದರಿಂದ ದಯಮಾಡಿ ತಿಳಿಸಿ. ಇವರು ನಿರಂತರ ಜ್ಯೋತಿ ಬಗ್ಗೆ ಉತ್ತರದಲ್ಲಿ ಕೊಟ್ಟಿರುವುದರಿಂದ ನಾನು ಕೇಳುತ್ತಿದ್ದೇನೆ.

ಅಧ್ಯಕ್ಷರು:– ಆಯಿತು.

ಕುಮಾರಿ ಶೋಭಾ ಕರಂದ್ಲಾಜೆ:– ಮಾನ್ಯ ಅಧ್ಯಕ್ಷರೆ, ಮೊದಲ ಹಂತದ ನಿರಂತರ ಜ್ಯೋತಿ ಬೇರೆ ಬೇರೆ ಕಾರಣಕ್ಕೆ ನಿಧಾನಗತಿಯಲ್ಲಿ ಸಾಗಿದೆ. ಇದಕ್ಕೆ ಕಾರಣವೇನೆಂದರೆ, ನಮ್ಮ ರಾಜ್ಯದಲ್ಲಿ ಎಷ್ಟು ಕಂಬಗಳು ಸಿಗಬೇಕಾಗಿತ್ತೋ, ಅಷ್ಟು ಕಂಬಗಳು ಸಿಕ್ಕಿಲ್ಲ. ನಾವು ಒಂದು ಲಕ್ಷ ಕಂಬಗಳನ್ನು ಕೇಳಿದರೆ, ಕೇವಲ 20,000 ಕಂಬಗಳು supply ಆಯಿತು. ಅದಕ್ಕಾಗಿ ಮೊದಲನೇ ಹಂತದ ನಿರಂತರ ಜ್ಯೋತಿ ಸ್ವಲ್ಪ ನಿಧಾನಗತಿಯಲ್ಲಿ ಸಾಗಿದೆ. ಇದಕ್ಕಿಂತ ಎರಡನೇ ಹಂತದ ನಿರಂತರ ಜ್ಯೋತಿ ಕಾರ್ಯಕ್ರಮ ಬಹಳ fast ಆಗಿ ಹೋಗುತ್ತಿದೆ. ಇದು ಕಂಬಗಳ ಕೊರತೆಯಿಂದ ನಿಧಾನವಾಯಿತು. ಈಗ ಹೊಸದಾಗಿ ನಮ್ಮ ದೇಶೀಯ ಟೆಂಡರ್ ಅನ್ನು ಕರೆದಿದ್ದೇವೆ. ಬೇರೆ ರಾಜ್ಯಗಳು ಕೂಡ supply ಮಾಡಬಹುದೆಂಬ ನಿರ್ಧಾರವನ್ನು ತೆಗೆದುಕೊಂಡ ಮೇಲೆ ಆದಷ್ಟು ಬೇಗನೇ ಕಂಬಗಳು supply ಆಗುತ್ತಿವೆ.

ಅಧ್ಯಕ್ಷರು:– ಆಯಿತು.

ಕುಮಾರಿ ಶೋಭಾ ಕರಂದ್ಲಾಜೆ:– ತಾವು ಎಷ್ಟು ಬಾರಿ ಕೇಳುವುದು? ತಮಗೆ ಎಲ್ಲಾ ವಿಷಯಗಳು ಗೊತ್ತಿದೆ. ನಿಮ್ಮ ವಾರಸುದಾರರು ನಾನು, ನಿಮಗೆ ಇಷ್ಟು ಗೊತ್ತಿರುವುದಿಲ್ಲವೇ?

ಅಧ್ಯಕ್ಷರು:– ಅವರಿಗೆ ಎಲ್ಲಾ ಗೊತ್ತಿದೆ. ಮಾನ್ಯ ಬಾಲಕೃಷ್ಣರವರೆ, ಕೇಳಿ.

ಶ್ರೀ ಡಿ.ಎನ್. ಜೀವರಾಜ್:– ಮಾನ್ಯ ಮಂತ್ರಿಯವರು ಮಾತ್ರ ಮೇಡಂನವರು, ಇವತ್ತು ಅಧಿಕಾರಿಗಳೆಲ್ಲಾ ರೇವಣ್ಣನವರ ಜೊತೆಯಲ್ಲಿದ್ದಾರೆ. ಇವರ ಹತ್ತಿರ ಮಾಹಿತಿಗಳೆಲ್ಲಾ ಇರುತ್ತವೆ. ಅವರ ಹತ್ತಿರ ಯಾವ ಮಾಹಿತಿಗಳೂ ಸಿಗುವುದಿಲ್ಲ.

ಶ್ರೀ ಸಿದ್ಧರಾಮಯ್ಯ:– ಮಾನ್ಯ ಸಚಿವರು ವಾರಸುದಾರರು ಎಂದು ಹೇಳಿದರು. ಅದು ಏನೆಂದು ಅರ್ಥವಾಗಲಿಲ್ಲ. ವಾರಸುದಾರರು ಎಂದರೆ legal heirs ಎಂದು.

ಅಧ್ಯಕ್ಷರು:– ಮಾನ್ಯ ಬಾಲಕೃಷ್ಣರವರೆ, ಕೇಳಿ.

ರಾಮನಗರ ಜಿಲ್ಲೆಯಲ್ಲಿ ಬಿ.ಪಿ.ಎಲ್ ಪಡಿತರ ಚೀಟಿ ಹೊಂದಿದವರು

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 43 (336)
ಸದಸ್ಯರ ಹೆಸರು : ಶ್ರೀ ರಾಜು ಕೆ. (ರಾಮನಗರ)
ಉತ್ತರಿಸುವ ಸಚಿವರು : ಕು. ಶೋಭಾ ಕರಂದ್ಲಾಜೆ (ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಸಚಿವರು)

ಪ್ರಶ್ನೆಗಳು:–

ಅ) ರಾಮನಗರ ಜಿಲ್ಲೆಯಲ್ಲಿ ಬಿ.ಪಿ.ಎಲ್ ಪಡಿತರ ಚೀಟಿ ಹೊಂದಿರುವವರ ಸಂಖ್ಯೆ ಎಷ್ಟು; ಅವರಲ್ಲಿ ಗ್ಯಾಸ್ ಸಂಪರ್ಕ ಹೊಂದಿರುವವರ ಸಂಖ್ಯೆ ಎಷ್ಟು; (ಗ್ರಾಮವಾರು ಮಾಹಿತಿ ನೀಡುವುದು);

ಆ) ರಾಮನಗರ ಜಿಲ್ಲೆಯಲ್ಲಿ ಎ.ಪಿ.ಎಲ್ ಪಡಿತರ ಚೀಟಿ ಹೊಂದಿರುವವರ ಸಂಖ್ಯೆ ಎಷ್ಟು?

ಇ) ಗ್ಯಾಸ್ ಸಂಪರ್ಕ ಹೊಂದಿರುವ ಬಿ.ಪಿ.ಎಲ್ ಕಾರ್ಡುದಾರರಿಗೆ ಸೀಮೆಎಣ್ಣೆ ವಿತರಣೆಯನ್ನು ನಿಲ್ಲಿಸಲಾಗಿದೆಯೇ?

ಈ) ಹಾಗಿದ್ದಲ್ಲಿ, ಗ್ರಾಮೀಣ ಪ್ರದೇಶದಲ್ಲಿ ವಿದ್ಯುತ್ ಕೊರತೆಯಿರುವುದರಿಂದ ಸೀಮೆಎಣ್ಣೆ ಅವಶ್ಯಕತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಉ) ಹಾಗಿದ್ದಲ್ಲಿ, ಸೀಮೆಎಣ್ಣೆಯನ್ನು ಅವಶ್ಯಕತೆಗನುಗುಣವಾಗಿ ಗ್ರಾಮೀಣ ಪ್ರದೇಶದಲ್ಲಿ ಬಿ.ಪಿ.ಎಲ್. ಕಾರ್ಡುದಾರರಿಗೂ ಸೀಮೆಎಣ್ಣೆ ವಿತರಿಸಲು ಕಮ್ರಕೈಗೊಳ್ಳಲಾಗುವುದೇ? (ಮಾಹಿತಿ ನೀಡುವುದು);